| |
|---|
| **Deposition Sheets (RP.No.57) Form No.4** |

**IN THE COURT OF II Addl. CIVIL JUDGE & J.M.F.C., KARKALA.**

**Criminal Case No. 1722/2022**

**ಪಿ.ಡಬ್ಲ್ಯು ಃ 1 ಸಿ.ಡಬ್ಲ್ಯು ಃ 1**

ಸಾಕ್ಷಿದಾರನ ಹೆಸರು ಃ ಸಂತೋಷ್ ಕುಲಾಲ್
ತಂದೆಯ ಹೆಸರು ಃ ಸಂಜೀವ ಮೂಲ್ಯ
ಪ್ರಾಯ ಃ 26 ವರ್ಷ
ಉದ್ಯೋಗ ಃ ವ್ಯಾಪಾರ
ವಾಸ ಃ ಅತ್ತೂರು

ದಿನಾಂಕ 26.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ದಿಃ05.02.2022 ರಂದು ನಾನು ನನ್ನ ಇನ್ ಸ್ಟ್ರಾಗಾಂ ಖಾತೆಯಲ್ಲಿ ಕುಂದಾಪುರದಲ್ಲಿ ನಡೆಯುತ್ತಿದ್ದ ಹಿಜಾಬ್ ನ ಬಗ್ಗೆ ನಡೆಯುತ್ತಿದ್ದ ವಿಡಿಯೋವನ್ನು ನನ್ನ ಖಾತೆಯಲ್ಲಿ ಹಂಚಿಕೊಂಡಿದ್ದು ಅದಕ್ಕೆ ಇದನ್ನೆಲ್ಲ ನೋಡುವಾಗ ನನಗೆ ನನಗೆ 3 ನೇ ತರಗತಿಯ ಪ್ರವಾಸ ಬರುತ್ತದೆ ಎಂದು ತಲೆಬರಹವನ್ನು ನೀಡಿದ್ದು ಅದಕ್ಕೆ ಪ್ರತಿಯಾಗಿ ನಾನು ಮಾರಿಗುಡಿ ಎಂಬ ಹೆಸರಿನ ಇನ್ ಸ್ಟಾಗ್ರಾಂ ಖಾತೆಯಿಂದ ನನ್ನ ಫೋಟೋವನ್ನು ಬಳಸಿ ಇವನಿಗೆ ತುಂಬಾ ಟೂರ್ ನೆನಪಾಗುತ್ತದೆ ಇವನನ್ನು ಸೀದಾ ಕಾರ್ಕಳದಿಂದ ಟೂರು ಕಳುಹಿಸುವ ಎಂದು ಬೇವರ್ಸಿ ಪುನ ಚರಂಡಿಗೆ ಬೀಳು ಎಂದು ಬರೆದಿದ್ದು ಅದಕ್ಕೆ ಕಾಮೆಂಟ್ ನಲ್ಲಿ ಹಲವರು ನನಗೆ ಬೆದರಿಕೆಯನ್ನು ಹಾಕಿರುತ್ತಾರೆ. ದಿಃ06.02.2022 ರಂದು ಮತ್ತು 07.02.2022 ರಂದು ಸದ್ರಿ ವಿಚಾರಕ್ಕೆ ಸಂಬಂಧಿಸಿದಂತೆ ನನಗೆ ಹಲವು ಅನಾಮೇಧೆಯ ಫೋನ್ ಕರೆಗಳಲ್ಲಿ ಕೊಲೆ ಬೆದರಿಕೆ ಬಂದಿರುತ್ತದೆ. ಸದ್ರಿ ಫೋನ್ ಕರೆಯಲ್ಲಿ ಇನ್ ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡಿರುವುದನ್ನು ಡೀಲಿಟ್ ಮಾಡು ಇಲ್ಲದಿದ್ದರೆ ನಿನ್ನನ್ನು ಕೊಂದು ಬಿಡುತ್ತೇನೆ ಎಂದು ಜೀವಬೆದರಿಕೆ

ಹಾಕಿರುತ್ತಾರೆ. ದಿಃ22.02.2022 ರಂದು ಮಧ್ಯರಾತ್ರಿ 1.00 ಗಂಟೆಗೆ ಕರೆ ಬಂದು ನೀನು ಮನೆಯಿಂದ ಹೊರಗೆ ಬಾ ನಿನ್ನನ್ನು ಕೊಲ್ಲದೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ಈ ಕುರಿತು ನಾನು ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಗೆ ದಿನಾಂಕ 07.02.2022 ಮತ್ತು ದಿನಾಂಕ 22.02.2022 ರಂದು ದೂರು ನೀಡಿರುತ್ತೇನೆ. ಸಾಕ್ಷಿಯು ಸದ್ರಿ ಪಿರ್ಯಾದಿಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದ್ರಿ ಪಿರ್ಯಾದುಗಳನ್ನು ನಿಪಿ-1 ಮತ್ತು 9 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು 9(ಎ) ಎಂದು ಗುರುತಿಸಲಾಯಿತು. ದಿಃ23.02.2022 ರಂದು ಬೆಳಿಗ್ಗೆ 11.00 ಗಂಟೆಗೆ ಪೊಲೀಸರು ನನ್ನ ಮನೆಗೆ ಸ್ಥಳ ತನಿಖೆಗಾಗಿ ಬಂದಿದ್ದು ಸ್ಥಳದಲ್ಲಿ ಚಾಸಾ-6 ಮತ್ತು 7 ರವರು ಹಾಜರಿದ್ದು ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿಕೊಟ್ಟಿರುತ್ತೇನೆ. ಸ್ಥಳದಲ್ಲಿ ಪೊಲೀಸರು ಸ್ಥಳ ಮಹಜರು ಮಾಡಿ ಭಾವಚಿತ್ರ ತೆಗೆದಿರುತ್ತಾರೆ. ಸಾಕ್ಷಿಯು ಘಟನಾ ಸ್ಥಳ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯ ಘಟನಾ ಸ್ಥಳ ಮಹಜರು ಸಮಯ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಸದ್ರಿ ಭಾವಚಿತ್ರವನ್ನು ನಿಪಿ-3 ಎಂದು ಗುರುತಿಸಲಾಯಿತು. ದಿಃ28.02.2022 ರಂದು ನಾನು ಪೊಲೀಸ್ ಠಾಣೆಗೆ ತೆರಳಿ ಘಟನೆಗೆ ಸಂಬಂಧಿಸಿದ ಇನ್ ಸ್ಟಾಗ್ರಾಂ ಖಾತೆಯ ಸ್ಕ್ರೀನ್ ಶಾಟ್ ಗಳನ್ನು ಪ್ರಿಂಟ್ ತೆಗೆದು ಮತ್ತು ಕಾಲ್ ರೆಕಾರ್ಡ್ ನ್ನು ಪೆನ್ ಡ್ರೈವ್ ಗೆ ಹಾಕಿ ಪೊಲೀಸರಿಗೆ ನೀಡಿರುತ್ತೇನೆ. ಆ ಸಮಯದಲ್ಲಿ ಚಾಸಾ-8 ಮತ್ತು 9 ರವರು ಪಂಚರಾಗಿ ಹಾಜರಿರುತ್ತಾರೆ. ಸದ್ರಿ ಸೊತ್ತುಗಳನ್ನು ಪೊಲೀಸರು ಸೊತ್ತು ಸ್ವಾಧೀನತಾ ಮಹಜರು ಮುಖೇನ ಸ್ವಾಧೀನಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ದಿಃ28.02.2022 ರ ಸೊತ್ತುಸ್ವಾಧೀನತಾ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ಮಹಜರನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ಹಾಜರುಪಡಿಸಿದ ಸ್ಕ್ರೀನ್ ಶಾಟ್ ನ 11 ಪ್ರತಿಗಳನ್ನು ನೋಡಿ ಗುರುತಿಸಿದ್ದು ಸದ್ರಿ ಪ್ರತಿಗಳನ್ನು ಒಟ್ಟಾಗಿ ನಿಪಿ-5 ಎಂದು, ಸೊತ್ತು ಸ್ವಾಧೀನತಾ ಮಹಜರು ವೇಳೆ ತೆಗೆದ 3 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಸದ್ರಿ ಭಾವಚಿತ್ರಗಳನ್ನು ಕ್ರಮವಾಗಿ ನಿಪಿ-6 ರಿಂದ 8 ಎಂದು ಗುರುತಿಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿದ ಸ್ಯಾಮ್‌ಸಂಗ್ ಕಂಪನಿಯ ಮೊಬೈಲ್ ನ್ನು ಪೊಲೀಸ್ ಠಾಣೆಗೆ

ಹಾಜರುಪಡಿಸಿದ್ದು ಪೊಲೀಸರು ಚಾಸಾ-6 ಮತ್ತು 12 ರವರ ಸಮಕ್ಷಮ ಸೊತ್ತು ಸ್ವಾಧೀನತಾ ಮಹಜರು ಮಾಡಿ ಭಾವಚಿತ್ರ ತೆಗೆದು ಸ್ವಾಧೀನಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ದಿಃ06.04.2022 ರ ಸೊತ್ತು ಸ್ವಾಧೀನತಾ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ಮಹಜರನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಭಾವಚಿತ್ರವನ್ನು ನಿಪಿ-11 ಎಂದು ಗುರುತಿಸಲಾಯಿತು. ಸದ್ರಿ ದಾಖಲೆಗೆ ಸಹಿಯನ್ನು 2022 ರಂದು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿಯು ಕಲಂ 65(ಬಿ) ಭಾರತೀಯ ಸಾಕ್ಷ್ಯ ಅಧಿನಿಯಮದಡಿ ನೀಡಿದ ಪ್ರಮಾಣಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ಪ್ರಮಾಣಪತ್ರವನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಾಲಯಿತು. ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ತಕ್ಷೀರಿಗೆ ಸಂಬಂಧಿಸಿದ ನನ್ನ ಮೊಬೈಲ್‌ನ್ನು ಹಾಗೂ ಪೆನ್ ಡ್ರೈವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಸ್ಯಾಮ್ ಸಂಗ್ ಮೊಬೈಲ್‌ನ್ನು ನೋಡಿ ಗುರುತಿಸಿದ್ದು, ಸದ್ರಿ ಮೊಬೈಲ್ ನ್ನು ಮು ಮಾ-1 ಎಂದು, ಸ್ಯಾನ್ ಡಿಸ್ಕ್ ಪೆನ್ ಡ್ರೈವನ್ನು ಮು ಮಾ-2 ಎಂದು ಗುರುತಿಸಲಾಯಿತು. ಘಟನೆಯ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು** ಃ ಆರೋಪಿತರ ಪರ ಃ ಶ್ರೀ ಕೆ ವಿ ಕೆ ವಕೀಲರು ಸಮಯವಕಾಶ ಕೋರಿದ್ದು ಕೋರಿಕೆಯ ಮೇರೆಗೆ ನೀಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ